## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಿ4(7) ಪ್ರಾ..ಶಾ.ಶಿ ವರ್ಗ/55/2011-12. ದಿನಾಂಕ: 27.04.2011

### ಅಧಿಕೃತ ಜ್ಞಾಪನ

ವಿಷಯ: 2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಗಣಕ ಯಂತ್ರ ವ್ಯವಸ್ಥೆ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007, ದಿನಾಂಕ: 01.09.2007
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ: 15.10.2007
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007, ದಿನಾಂಕ: 14.11.2007
4. ಸರ್ಕಾರದ ಆದೇಶ ಸಂಖ್ಯೆ: ಇಡಿ 7 ಇಟಿಆರ್ 2011, ದಿ.20.04.2011
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ. 37 ಇಟಿಆರ್.2009 ದಿನಾಂಕ: 23.04.2011.

- * * * -

1. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯನ್ವಯ ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ-3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 15.10.2007 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 6 ರಂತೆ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರು ಹಾಗೂ ತತ್ಸಮಾನ ವೃಂದಕ್ಕೆ ಸಂಬಂಧಪಟ್ಟ ವರ್ಗಾವಣೆಗೆ ಸಂಬಂಧಿಸಿದಂತೆ ಎರಡು ಅರ್ಜಿ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ. (ಪರಸ್ಪರ ನಮೂನೆ-1, ಕೋರಿಕೆ ನಮೂನೆ-2)

3. ಮೇಲಿನ ಆದೇಶಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು 2011 **ರ ಏಪ್ರಿಲ್/ಮೇ/ಜೂನ್ ಮಾಹೆಯಲ್ಲಿ** ನಡೆಸಬೇಕಾಗಿರುತ್ತದೆ. (ಉಲ್ಲೇಖ-4) **ವರ್ಗಾವಣೆ ಬಯಸುವವರು ಅರ್ಜಿಗಳನ್ನು ಇಂಟರ್‌ನೆಟ್ ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ.** [ವೇಳಾಪಟ್ಟಿಯನ್ನು ಅನುಬಂಧ-'ಅ' ನಲ್ಲಿ ಲಗತ್ತಿಸಿದೆ].

ಶಿಕ್ಷಕರು ಗಣಕೀಕರಿಸಿದ ವರ್ಗಾವಣಾ ಅರ್ಜಿಯ ಮುದ್ರಿತ ಮಾಹಿತಿಯನ್ನು ವೇಳಾಪಟ್ಟಿಯಲ್ಲಿ ನಿಗದಿಪಡಿಸಲಾದ ದಿನಾಂಕದೊಳಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಖುದ್ದಾಗಿ ಅರ್ಜಿಯಲ್ಲಿ

ನಮೂದಿಸಿರುವ ಮಾಹಿತಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿ ಸ್ವೀಕೃತಿಯನ್ನು ಕಡ್ಡಾಯವಾಗಿ ಪಡೆಯುವುದು. ಮಾಹಿತಿ ನೀಡಿದ ಬಗ್ಗೆ ಸ್ವೀಕೃತಿ ಪಡೆಯದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸ್ವೀಕೃತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇವಾ ಮಾಹಿತಿಯೊಂದಿಗೆ ಹೋಲಿಸಿ ದೃಢೀಕರಿಸಿ ಕಛೇರಿಯ ಮೊಹರನ್ನು ಹಾಕಿ ಕ್ರಮಬದ್ಧವಾಗಿ ಸ್ವೀಕೃತಿ ನೀಡತಕ್ಕದ್ದು.

4. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ನಿಯಮಗಳು–2011 ರ ಪ್ರಕಾರ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು–2007 ರ 15 ನೇ ನಿಯಮದಡಿ ವರ್ಗಾವಣೆಗೊಂಡು ಬಿಡುಗಡೆಯಾದ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಅವರು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿನ ನಿಲುಗಡೆಯ ಅವಧಿ ಕನಿಷ್ಠ 3 ವರ್ಷ ಪೂರೈಸಿರತಕ್ಕದ್ದು. ಈ ಪರಿಮಿತಿಯು ಎಲ್ಲಾ ಬಗೆಯ ವರ್ಗಾವಣೆಗಳಿಗೂ ಅನ್ವಯಿಸುತ್ತದೆ.

5. ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರು ಅಂತರ್ಜಾಲದ ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು ಸರಿಯಿದೆಯೇ ಎಂಬುದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಮಾಣೀಕರಿಸತಕ್ಕದ್ದು. ಪರಿಶೀಲಿಸಿದ ಅರ್ಜಿಯಲ್ಲಿನ ಮಾಹಿತಿಯ ಮುದ್ರಿತ ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ರಕ್ಷಾ ಕಡತದಲ್ಲಿಡುವುದು ಹಾಗೂ ಪರಿಶೀಲನೆ ಅವಶ್ಯವೆಂಬ ಸಂದರ್ಭದಲ್ಲಿ ಹಾಜರುಪಡಿಸುವುದು.

6. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009, ದಿನಾಂಕ: 23.04.2011 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಶಿಕ್ಷಕರು ಪ್ರಸ್ತುತ **ವೃಂದದಲ್ಲಿ ಎ, ಬಿ, ಸಿ ವಲಯಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಸರಿಯಾಗಿ ದಾಖಲು ಮಾಡಿದ್ದಾರೆಯೇ** ಎಂಬ ಬಗ್ಗೆಯೂ ಸಹ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು. ಉದಾಹರಣೆಗೆ ಪ್ರಾಥಮಿಕ ಶಾಲಾ ಶಿಕ್ಷಕರು ಪದೋನ್ನತಿ ಪಡೆದು ಪ್ರೌಢಶಾಲಾ ಶಿಕ್ಷಕರಾಗಿ ಬಂದಿದ್ದಲ್ಲಿ, ಅಂತಹ ಶಿಕ್ಷಕರ ಸೇವೆಯನ್ನು ಪದೋನ್ನತಿ ಪಡೆದ ಹುದ್ದೆಯಲ್ಲಿ ಸೇವೆಗೆ ಹಾಜರಾದ ದಿನಾಂಕದಿಂದ ಮಾತ್ರ ವೈಟೇಜ್‌ಗೆ ಪರಿಗಣಿಸತಕ್ಕದ್ದು.

7. ಉಪನಿರ್ದೇಶಕರು (ಆಡಳಿತ) ರವರು ಅವರ ಆಡಳಿತ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ, ಬಿ, ಸಿ, ವಲಯಗಳೆಂದು ವರ್ಗೀಕರಿಸಿ, ಅಪ್‌ಡೇಟ್ ಮಾಡಿರುವುದನ್ನು ದಿನಾಂಕ: 30.04.2011 ರಂದು ಅವರವರ ಕಛೇರಿಯ ಸೂಚನಾ ಫಲಕ/ವೆಬ್ ಸೈಟ್‌ನಲ್ಲಿ ಪ್ರಕಟಿಸುವುದು. ಅಪ್ಡೇಟ್ ಮಾಡಿರುವುದನ್ನು ಬೆಂಗಳೂರು ಆಯುಕ್ತರ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು (ಇ–ಆಡಳಿತ) ಇವರು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದು. **ಎ,ಬಿ,ಸಿ ವಲಯದ ಶಾಲೆಗಳನ್ನು ವರ್ಗೀಕರಿಸಿರುವುದನ್ನು ತಪ್ಪಾಗಿ ನಮೂದಿಸಿದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.**

8. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರು (ಆಡಳಿತ) ಇವರು ವರ್ಗಾವಣಾ ಪ್ರಾಧಿಕಾರಿಗಳಾಗಿರುತ್ತಾರೆ. **ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ವಿಭಾಗ ಮಟ್ಟದಲ್ಲಿ ಸಂಬಂಧಿಸಿದ ಆಯುಕ್ತಾಲಯದ ಜಂಟಿ ನಿರ್ದೇಶಕರು** ವರ್ಗಾವಣಾ ಪ್ರಾಧಿಕಾರಿಗಳಾಗಿರುತ್ತಾರೆ. ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ **ಸಹನಿರ್ದೇಶಕರು, ಮೈಸೂರು ವಿಭಾಗ,** ಮೈಸೂರು, ಇವರು ವರ್ಗಾವಣಾ ಪ್ರಾಧಿಕಾರಿಗಳಾಗಿರುತ್ತಾರೆ.

9. ವರ್ಗಾವಣೆಯ ಅಧಿನಿಯಮ 2007 ರ ಸೆಕ್ಷನ್ 6 (2) ರಲ್ಲಿ ನಮೂದಿಸಿರುವ ಪ್ರಕರಣಗಳಲ್ಲಿರುವ ಶಿಕ್ಷಕರು ಹಾಗೂ **ದಿನಾಂಕ 04.05.2005 ಕ್ಕೆ ಐದು ವರ್ಷಗಳ** ಸೇವೆ ಪೂರ್ಣಗೊಳಿಸಿರುವ ಶಿಕ್ಷಕರನ್ನು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಇನ್ನೊಂದು ಜೇಷ್ಠತಾ ಘಟಕಕ್ಕೆ ವರ್ಗಾಯಿಸಬಹುದು.

**10. ಹೆಚ್ಚುವರಿ ಶಿಕ್ಷಕರ ವರ್ಗಾವಣೆ:**

1. ಹೆಚ್ಚುವರಿ ಶಿಕ್ಷಕರನ್ನು ಪರಸ್ಪರ ವರ್ಗಾವಣೆಗೆ ಪರಿಗಣಿಸಬಾರದು.

2. ಹೆಚ್ಚುವರಿ ಶಿಕ್ಷಕರು 2011 ರ ಏಪ್ರಿಲ್/ಮೇ ತಿಂಗಳಲ್ಲಿ ನಡೆದ ಕೌನ್ಸಿಲಿಂಗ್‌ನಲ್ಲಿ ಸ್ಥಳಾಂತರಗೊಂಡಿದ್ದಲ್ಲಿ ಅಂತಹ ಶಿಕ್ಷಕರ ಅರ್ಜಿಗಳನ್ನು ಪರಿಗಣಿಸುವಂತಿಲ್ಲ.

3. ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರ ಮಾಡಲು ಸಾಧ್ಯವಾಗದೇ ಮೂಲ ಸ್ಥಳದಲ್ಲೇ ಮುಂದುವರೆಯುತ್ತಿರುವ ಅಧ್ಯಾಪಕರು ವರ್ಗಾವಣೆ ಬಯಸಿದಲ್ಲಿ ಮತ್ತು ಅರ್ಹರಿದ್ದಲ್ಲಿ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದು.

**11. ಪರಸ್ಪರ ವರ್ಗಾವಣೆಗಳು:-**

ಅ) ಶಿಕ್ಷಕರ ಖಾಯಂ ಪೂರ್ವ ಸೇವಾ ಅವಧಿಯು ಘೋಷಿಸಲ್ಪಟ್ಟಿದ್ದರೆ ಮಾತ್ರ ಅವರ ಪರಸ್ಪರ ವರ್ಗಾವಣೆ ಮನವಿಗಳನ್ನು ಪರಿಗಣಿಸುವುದು. ಆದರೆ, ಈ ಅಧಿಕೃತ ಜ್ಞಾಪನದ ಅಂಶ 4 ರಲ್ಲಿ ಸೂಚಿಸಿರುವ ನಿಲುಗಡೆ ಮಿತಿಯನ್ನು ದಾಟಿರದ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಹರಲ್ಲ. ಪರಸ್ಪರ ವರ್ಗಾವಣೆಗಳನ್ನು ಮಾಡುವಾಗ ವೃಂದ ಮತ್ತು ವಿಷಯಗಳ ಹೊಂದಾಣಿಕೆ ಆಗಿದ್ದಲ್ಲಿ ಮಾತ್ರ ಜಾರಿಗೊಳಿಸತಕ್ಕದ್ದು.

ವರ್ಗಾವಣೆ ಬಯಸುವ ಶಿಕ್ಷಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ಅಂತರ್ಜಾಲದಲ್ಲಿ ಯಾರು ಕ್ರಮ ಸಂಖ್ಯೆ 1 ರಲ್ಲಿ ವೈಯಕ್ತಿಕ ಮಾಹಿತಿ ಭರ್ತಿ ಮಾಡಬೇಕೆಂದು ನಿರ್ಧರಿಸಿಕೊಂಡು ಅವರ ವೈಯಕ್ತಿಕ ಮಾಹಿತಿಯನ್ನು ಕ್ರಮ ಸಂಖ್ಯೆ 1 ರಲ್ಲಿ ಭರ್ತಿ ಮಾಡುವುದು. ತದನಂತರ ಕ್ರಮ ಸಂಖ್ಯೆ 1 ರ ಶಿಕ್ಷಕರ ಅರ್ಜಿ ಸಂಖ್ಯೆಯನ್ನೆ ಬಳಸಕೊಂಡು ಕ್ರಮ ಸಂಖ್ಯೆ 2 ರಲ್ಲಿ ಸಂಬಂಧಿಸಿದ ಶಿಕ್ಷಕರು ಅವರ ವೈಯಕ್ತಿಕ ಮಾಹಿತಿಯನ್ನು ಭರ್ತಿ ಮಾಡುವುದು. ಹೀಗೆ ಭರ್ತಿ ಮಾಡಿದ ಮಾಹಿತಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ಅವರ ಅರ್ಜಿಯ ಮಾಹಿತಿ ಸರಿಯಾಗಿರುವುದನ್ನು ಖಚಿತಪಡಿಸಿಕೊಂಡು ಸ್ವೀಕೃತಿಯನ್ನು ಪಡೆಯುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರ್ಜಿ ನಮೂನೆಯನ್ನು ಭರ್ತಿ ಮಾಡಿದ ದಿನದಿಂದಲೇ ಸಂಬಂಧಿಸಿದ ಅಧ್ಯಾಪಕರಿಗೆ ಮಾಹಿತಿಯನ್ನು ಪರಿಶೀಲಿಸುವ ಮತ್ತು ಸ್ವೀಕೃತಿ ಕೊಡಿಸಲು ಸೂಕ್ತ ಏರ್ಪಾಟನ್ನು ಮಾಡುವುದು.

ಕ್ರಮ ಸಂಖ್ಯೆ 1 ಕ್ಕೆ ವೈಯಕ್ತಿಕ ಮಾಹಿತಿ ಭರ್ತಿ ಮಾಡುವ ಸ್ವಾತಂತ್ರ್ಯ ಅಧ್ಯಾಪರಿಗಿರುತ್ತದೆ. ಕ್ರಮ ಸಂಖ್ಯೆ 1 ರಲ್ಲಿ ಇಂತಹ ಅಧ್ಯಾಪಕರೇ ವೈಯಕ್ತಿಕ ಮಾಹಿತಿ ಭರ್ತಿ ಮಾಡತಕ್ಕದ್ದು ಎಂದು ಯಾವ ಅಧಿಕಾರಿಯೂ ಒತ್ತಾಯ ಮಾಡತಕ್ಕದ್ದಲ್ಲ. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಆ) ಪರಸ್ಪರ ವರ್ಗಾವಣೆ ಬಯಸುವ ಶಿಕ್ಷಕರು ಕೇವಲ ಒಬ್ಬರೊಂದಿಗೆ ಮಾತ್ರ ಪರಸ್ಪರ ವರ್ಗಾವಣಾ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಶಿಕ್ಷಕರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಇ) ಪರಸ್ಪರ ವರ್ಗಾವಣೆ ಕೋರಿರುವ ಶಿಕ್ಷಕರು ನಿಗದಿತ ದಿನಾಂಕದಂದು ವರ್ಗಾವಣೆ ಅರ್ಜಿಯ ಕ್ರಮ ಸಂಖ್ಯೆ 1 ರ ಶಿಕ್ಷಕರ ವರ್ಗಾವಣೆ ಪ್ರಾಧಿಕಾರದ ಬಳಿ ಇಬ್ಬರೂ ಕೌನ್ಸೆಲಿಂಗ್‌ಗೆ ಹಾಜರಾಗಿ ವರ್ಗಾವಣಾ ಆದೇಶ ಪಡೆಯುವುದು.**

**ಈ) ಒಂದೇ ಕ್ಲಸ್ಟರ್ [ಸಮೂಹ] ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣ ಪರಿಗಣಿಸಲಾಗುವುದಿಲ್ಲ.**

ಉ) ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ನೇಮಕವಾಗಿರುವ ಟಿ.ಜಿ.ಟಿ.ಗಳನ್ನು ಅದೇ ಯೋಜನೆ ಅಡಿಯಲ್ಲಿ ನೇಮಕಗೊಂಡಿರುವ ಟಿ.ಜಿ.ಟಿ.ಗಳೊಂದಿಗೆ ಪರಸ್ಪರ ವರ್ಗಾವಣೆ ಮಾಡುವುದು. ಇದೇ ರೀತಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಪ್ರಾಥಮಿಕ ಶಾಲಾ ಶಿಕ್ಷಕರು ಅದೇ ವಿಷಯದ ಸರ್ವ ಶಿಕ್ಷಣ ಅಭಿಯಾನ ಯೋಜನೆ ಶಿಕ್ಷಕರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದು.

ಊ) ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಟಿ.ಜಿ.ಟಿ.ಗಳ ಮೂಲ ವೇತನಕ್ಕಿಂತ ಕಡಿಮೆ ಅಥವಾ ಸಮಾನವಾದ ಮೂಲ ವೇತನ ಪಡೆಯುತ್ತಿರುವ ರಾಜ್ಯ ವಲಯದ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಬೇಕು.

ಋ) ಹೆಚ್ಚುವರಿ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸುವಂತಿಲ್ಲ.

**12. ಆದ್ಯತಾ ಪಟ್ಟಿ ಸಿದ್ಧಪಡಿಸುವುದು:-**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು-2007 ರ ನಿಯಮ '7' ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009, ದಿನಾಂಕ: 23.04.2011 ರ ನಿಯಮ '7' ರಲ್ಲಿನ ತಿದ್ದುಪಡಿಯಂತೆ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸುವುದು.

13. (ಅ) ವಿವಾಹಿತ ಶಿಕ್ಷಕರ ಪ್ರಕರಣದಲ್ಲಿ ಪತಿ/ಪತ್ನಿಯನ್ನು ಸೇರಬಯಸುವವರು ಅವರ ಸಂಗಾತಿಯ (Spouse) ವಾಸಸ್ಥಳದ ದೃಢೀಕರಣವನ್ನು ಒದಗಿಸುವುದು.

(ಆ) ವಿಧವಾ ಪ್ರಕರಣದಲ್ಲಿ ಪತಿಯ ಮರಣ ಸಮರ್ಥನ ಪತ್ರ ಒದಗಿಸುವುದು.

(ಇ) ತೀವ್ರತರ ಖಾಯಿಲೆ ಪ್ರಕರಣಗಳಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿ ನೀಡಿದ ಪ್ರಮಾಣ ಪತ್ರ ಒದಗಿಸುವುದು.

(ಈ) ಅಂಗವಿಕಲ ಅಭ್ಯರ್ಥಿಗಳು ಜಿಲ್ಲಾ ಸರ್ಜನ್ ನೀಡಿದ ಪ್ರಮಾಣ ಪತ್ರ ಒದಗಿಸುವುದು.

**14. ಖಾಲಿ ಹುದ್ದೆಗಳ ಪ್ರಕಟಣೆ:-**

ವರ್ಗಾವಣೆ ಪ್ರಕ್ರಿಯೆಯಲ್ಲಿ ನಿಯಮಾನುಸಾರ ಖಾಲಿ ಹುದ್ದೆ ಗುರುತಿಸುವುದು ಪ್ರಮುಖವಾದ ಘಟ್ಟ. ಖಾಲಿ ಹುದ್ದೆಗಳನ್ನು ಪ್ರಕಟಿಸುವಾಗ ಹೆಚ್ಚುವರಿ ಖಾಲಿ ಹುದ್ದೆಗಳನ್ನು ಪ್ರತ್ಯೇಕವಾಗಿ ಪ್ರಕಟಿಸುವುದು. ಹೆಚ್ಚುವರಿ ಖಾಲಿ ಹುದ್ದೆಗಳಿಗೆ ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡಕೂಡದು. [**ಜಿಲ್ಲೆಯೊಳಗೆ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ನಂತರ ಈಗಾಗಲೇ ಮಂಜೂರಾಗಿರುವ ಹುದ್ದೆಗಳಲ್ಲಿ ಅಗತ್ಯವಿರುವ ಖಾಲಿ ಹುದ್ದೆಗಳನ್ನು ಮಾತ್ರ ವರ್ಗಾವಣೆಗೆ ಗಣಕೀಕರಿಸುವುದು. ಹೆಚ್ಚುವರಿ ಪ್ರಕ್ರಿಯೆಯಲ್ಲಿ ಅಗತ್ಯ ಎಂದು ಕಂಡುಬಂದ ಸ್ಥಳಗಳನ್ನು(Needy Schools) ಈ ಪಟ್ಟಿಯಲ್ಲಿ ಸೇರಿಸಕೂಡದು**].

**ಎಸ್.ಎಸ್.ಎ. ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಟಿ.ಜಿ.ಟಿ. ಶಿಕ್ಷಕರು ಎಸ್.ಎಸ್.ಎ. ಮತ್ತು ಟಿ.ಜಿ.ಟಿ ಖಾಲಿ ಹುದ್ದೆಗೆ ವರ್ಗಾವಣೆಗೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಪರಿಗಣಿಸಬಹುದು.**

**15. ವಿಶೇಷ ಸೂಚನೆಗಳು:-**

ಅ) ವ್ಯಾಪಕ ಪ್ರಚಾರ:- ಕ್ಷೇತ್ರ ಶಿಕ್ಷಣಾಧಿಕಾರಿಗಳ, ಉಪನಿರ್ದೇಶಕರುಗಳ, ಸಹನಿರ್ದೇಶಕರುಗಳು ತಮ್ಮ ಕಛೇರಿಯ ಸೂಚನಾ ಫಲಕಗಳಲ್ಲಿ ಈ ಬಗ್ಗೆ ಪ್ರಕಟಿಸಲು ತಿಳಿಸಿದೆ. ಅಲ್ಲದೆ, ಸ್ಥಳೀಯ ಪತ್ರಿಕೆಗಳಲ್ಲೂ ಉಚಿತವಾಗಿ ಪ್ರಕಟಿಸುವ ಬಗ್ಗೆ ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳು ಕ್ರಮ ಕೈಗೊಳ್ಳುವುದು.

ಆ) ವೇಳಾಪಟ್ಟಿಯಲ್ಲಿ ಸೂಚಿಸಿರುವಂತೆ ನಿಗದಿತ ಸಮಯದಲ್ಲಿ ಕ್ರಮ ಕೈಗೊಳ್ಳುವುದು.

ಇ) ವರ್ಗಾವಣೆಯ ಸಂಬಂಧ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳ ಹಂತದಲ್ಲಿಯೇ ಸಹಾಯವಾಣಿ ನಿರ್ವಹಿಸಿ ವರ್ಗಾವಣಾ ನಿಯಮದಂತೆ ಸೂಕ್ತ ಉತ್ತರವನ್ನು ನೀಡುವುದು.

ಈ) ವರ್ಗಾವಣಾ ಪ್ರಾಧಿಕಾರಿಗಳು ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು.

ಉ) ಕೌನ್ಸಿಲಿಂಗ್ ಮೂಲಕ ವರ್ಗವಾದ ಶಿಕ್ಷಕರಿಗೆ ಸ್ಥಳದಲ್ಲಿಯೇ ವರ್ಗಾವಣಾ ಆದೇಶವನ್ನು ನೀಡುವುದು.

ಊ ಶಿಕ್ಷಕರ ಅನುಕೂಲಕ್ಕಾಗಿ ಬೋಧನಾ ವಿಷಯಗಳನ್ನು ಬದಲಾಯಿಸಿ ವರ್ಗಾವಣೆ ಮಾಡಕೂಡದು.

**ಋ) ಪರಸ್ಪರ ವರ್ಗಾವಣೆ, ತೀವ್ರತರ ಖಾಯಿಲೆ, ಅಂಗವಿಕಲ, ವಿಧವಾ ಶಿಕ್ಷಕಿಯರ, ಸೈನಿಕರ ಪ್ರಕರಣಗಳು ಮತ್ತು ನೌಕರರ ಸಂಘಗಳಿಗೆ ಚುನಾಯಿತ ಪದಾಧಿಕಾರಿಗಳ ಪ್ರಕರಣಗಳ ವರ್ಗಾವಣಾ ಸಂಖ್ಯೆಯನ್ನು ಹೊರತುಪಡಿಸಿ ಒಟ್ಟು ಕೋರಿಕೆ ಮೇರೆಗಿನ ಮತ್ತು ಸಾರ್ವಜನಿಕ ಹಿತಾಸಕ್ತಿಯ ಘಟಕದೊಳಗಿನ ವರ್ಗಾವಣೆಗಳ ಸಂಖ್ಯೆ ಶೇಕಡ. 5 ಮತ್ತು ಘಟಕದ ಹೊರಗಿನ ವರ್ಗಾವಣೆಗಳ ಸಂಖ್ಯೆ ಶೇಕಡ 1 ನ್ನು ಮೀರಬಾರದು.**

16. ವರ್ಗಾವಣೆಗೆ ಆದ್ಯತಾ ಪಟ್ಟಿಯಲ್ಲಿ ತೀವ್ರತರ ಖಾಯಿಲೆ, ಅಂಗವಿಕಲತೆ, ವಿವಾಹಿತರ ಪ್ರಕರಣದ ಇತ್ಯಾದಿ ಆದ್ಯತೆ ಕೋರುವವರು ಸಂಬಂಧಿಸಿದ ದಾಖಲೆಗಳನ್ನು ದಿನಾಂಕ: 13.05.2011 ರಂದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಸದರಿ ದಾಖಲೆಗಳನ್ನು ಕ್ರೋಡೀಕೃತ ಪಟ್ಟಿಯೊಂದಿಗೆ ಉಪನಿರ್ದೇಶಕರು

(ಆಡಳಿತ) ಇವರು ಸಂಬಂಧಿಸಿದ ಎಲ್ಲಾ ವರ್ಗಾವಣಾ ಪ್ರಾಧಿಕಾರಿಗಳಿಗೆ ದಿನಾಂಕ: 16.05.2011 ರಂದು ಮುದ್ದಾಂ ಸಲ್ಲಿಸಿ ಸ್ವೀಕೃತಿ ಪಡೆಯುವುದು.

17. 2011-12ನೇ ಸಾಲಿನ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಗಳು ಉಲ್ಲೇಖ-1 ರಿಂದ 5 ರ ಸರ್ಕಾರದ ಆದೇಶಗಳನ್ವಯ ಹಾಗೂ ನೀಡಿರುವ ವೇಳಾಪಟ್ಟಿಯ ಪ್ರಕಾರ ಕ್ರಮ ವಹಿಸುವಂತೆ ತಿಳಿಸಿದೆ.

(ವಿ.ದೇವಪ್ರಕಾಶ್)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ 04 ವಿಭಾಗೀಯ ಸಹ ನಿರ್ದೇಶಕರು ರವರಿಗೆ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ಜಂಟಿ ನಿರ್ದೇಶಕರು, ಆಯುಕ್ತರ ಕಚೇರಿ, ಬೆಂಗಳೂರು, ಅಪರ ಆಯುಕ್ತರ ಕಚೇರಿ, ಧಾರವಾಡ / ಗುಲ್ಬರ್ಗಾ
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಸಹ ನಿರ್ದೇಶಕರು, ಮದ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು
10. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
11. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
12. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ
13. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
14. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು
15. ಕಛೇರಿಪ್ರತಿ.

\\Typing3server\d\E\EST4\Mamatha\LOKESH\Transfer-2011.doc

## ಅನುಬಂಧ (ಅ)

## ವರ್ಗಾವಣಾ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ.ಸ. | ವಿವರ | ದಿನಾಂಕ | ನಿರ್ವಹಣಾ ಅಧಿಕಾರಿ |
|---|---|---|---|
| 01 | ವರ್ಗಾವಣಾ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರ ಕಛೇರಿಯ ನೋಡಲ್ ಅಧಿಕಾರಿಗಳ ಸಭೆ | 27.04.2011 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು – ಶಿಕ್ಷಕರ ಸದನ |
| 02 | ಎ, ಬಿ, ಸಿ, ವಲಯಗಳಂತೆ ಶಾಲೆಗಳ ಪಟ್ಟಿಯನ್ನು ನಿಯಮಾನುಸಾರ ಪರಿಷ್ಕರಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ದಿನಾಂಕ | 28.04.2011 | ಜಿಲ್ಲಾ ಉಪನಿರ್ದೇಶಕರು (ಆಡಳಿತ), ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ, ಬೆಂಗಳೂರು |
| 03 | ಹುದ್ದೆಗಳ ವೃಂದಬಲ ಹಾಗೂ ಖಾಲಿ ಹುದ್ದೆಗಳ ಗಣಕೀಕರಣ | 28.04.2011 ರಿಂದ 07.05.2011 | ಜಿಲ್ಲಾ ಉಪನಿರ್ದೇಶಕರು (ಆಡಳಿತ), ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ, ಬೆಂಗಳೂರು |
| 04 | ವರ್ಗಾವಣಾ ಅರ್ಜಿ ನಮೂನೆಗಳನ್ನು ವೆಬ್‌ಸೈಟ್‌ಗೆ ಫೀಡ್ ಮಾಡುವುದು ಹಾಗೂ ವರ್ಗಾವಣೆ ಬಯಸುವ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸಲು ಪ್ರಕಟಣೆ | 28.04.2011 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು, ಧಾರವಾಡ/ ಗುಲ್ಬರ್ಗಾ |
| 05 | ವರ್ಗಾವಣೆ ಅರ್ಜಿಯಲ್ಲಿ ವೈಯಕ್ತಿಕ ವಿವರಗಳನ್ನು ಸಂಬಂಧಿಸಿದ ಶಿಕ್ಷಕರು ಗಣಕೀಕರಿಸುವುದು. | 28.04.2011 ರಿಂದ 10.05.2011 | ಸಂಬಂಧಿಸಿದ ಶಿಕ್ಷಕರು ಪ್ರಕಟಣಾ ದಿನಾಂಕದಿಂದ 10.05.2011 ರೊಳಗೆ ಗಣಕೀಕರಿಸುವುದು. |
| 06 | ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಹಾಜರಾಗಿ ಅವರ ವರ್ಗಾವಣೆಗೆ ಸಂಬಂಧಿಸಿದ ದಾಖಾಲಾತಿಗಳನ್ನು ನೀಡಿ ಸ್ವೀಕೃತಿಯನ್ನು ಪಡೆಯುವುದು | 30.04.2011 ರಿಂದ 11.05.2011 | ವರ್ಗಾವಣೆಗೆ ಅರ್ಜಿ ಸಲ್ಲಿಸಿದ ಶಿಕ್ಷಕರು |
| 07 | ವರ್ಗಾವಣಾ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಪರಿಶೀಲಿಸಿ ದೃಢೀಕರಿಸುವುದು. | 30.04.2011 ರಿಂದ 12.05.2011 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 08 | ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಯನ್ನು ಸಮರ್ಥಿಸುವ ದಾಖಲೆಗಳನ್ನು ಉಪನಿರ್ದೇಶಕರಿಗೆ ಸಲ್ಲಿಸುವ ದಿನಾಂಕ | 13.05.2011 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 09 | ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಯನ್ನು ಸಮರ್ಥಿಸುವ ದಾಖಲೆಗಳನ್ನು ಉಪನಿರ್ದೇಶಕರು ವರ್ಗಾವಣಾ ಪ್ರಾಧಿಕಾರಕ್ಕೆ ಮುದ್ದಾಂ ಸಲ್ಲಿಸುವ ದಿನಾಂಕ | 16.05.2011 | ಉಪನಿರ್ದೇಶಕರು |
| 10 | ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರ ಪಟ್ಟಿ ಪ್ರಕಟಣೆ | 17.05.2011 | ಎಲ್ಲಾ ವರ್ಗಾವಣಾ ಪ್ರಾಧಿಕಾರಿಗಳು |
| 11 | ಪ್ರೌಢಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆಗೆ ಕೌನ್ಸೆಲಿಂಗ್ | 19.05.2011 | ಎಲ್ಲಾ ವರ್ಗಾವಣಾ ಪ್ರಾಧಿಕಾರಿಗಳು |
| 12 | ಪ್ರಾಥಮಿಕ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆಗೆ ಕೌನ್ಸೆಲಿಂಗ್ | 20.05.2011 ರಿಂದ 21.05.2011 | ಎಲ್ಲಾ ವರ್ಗಾವಣಾ ಪ್ರಾಧಿಕಾರಿಗಳು |
| 13 | ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕಟಣೆ (ಎಲ್ಲಾ ಹಂತದಲ್ಲಿ ಏಕಕಾಲಕ್ಕೆ) | 21.05.2011 | ಉಪ ನಿರ್ದೇಶಕರು, ಸಹ ನಿರ್ದೇಶಕರು ಮತ್ತು ರಾಜ್ಯ ಮಟ್ಟದ ವರ್ಗಾವಣಾ ಪ್ರಾಧಿಕಾರ |
| 14 | ತಾತ್ಕಾಲಿಕ ಆದ್ಯತಾಪಟ್ಟಿಗೆ ಆಕ್ಷೇಪಣೆಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೊನೆಯ ದಿನಾಂಕ (ಕ್ಷೇತ್ರ ಶಿಕ್ಷಣಾಧಿಕಾರಿಗಳ ದೃಢೀಕರಣದೊಂದಿಗೆ) | 21.05.2011 ರಿಂದ 26.05.2011 | ಸಂಬಂಧಿಸಿದ ಶಿಕ್ಷಕರು |

| | | | |
|---|---|---|---|
| 15 | ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸುವ ದಿನಾಂಕ ಮತ್ತು ಜಿಲ್ಲಾ ಮತ್ತು ವಿಭಾಗ ಮಟ್ಟದಲ್ಲಿ ಕೌನ್ಸೆಲಿಂಗ್‌ಗಾಗಿ ಖಾಲಿ ಹುದ್ದೆ ಪ್ರಕಟಣೆ (ಎಲ್ಲಾ ಹಂತದಲ್ಲಿ ಏಕಕಾಲಕ್ಕೆ) | 28.05.2011 | ಉಪನಿರ್ದೇಶಕರು (ಆಡಳಿತ)- ಜಿಲ್ಲಾ ಮಟ್ಟ, ಸಹ ನಿರ್ದೇಶಕರು - ವಿಭಾಗ ಮಟ್ಟ, ಸಂಬಂಧಿಸಿದ ನಿರ್ದೇಶಕರು - ರಾಜ್ಯ ಮಟ್ಟ |
| 16 | ಪ್ರಾಥಮಿಕ ಶಾಲಾ ಶಿಕ್ಷಕರರಿಗೆ ಕೌನ್ಸೆಲಿಂಗ್ (ಜಿಲ್ಲಾ ಮಟ್ಟದಲ್ಲಿ)<br>* ಮುಖ್ಯ ಶಿಕ್ಷಕರು, ಪದವೀಧರೇತರ ಮುಖ್ಯ ಶಿಕ್ಷಕರ ವೃಂದ ಮತ್ತು ವಿಶೇಷ ಶಿಕ್ಷಕರು<br>* ಸಹಶಿಕ್ಷಕರು | 31.05.2011<br>01.06.2011 &02.06.2011 | ಉಪ ನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 17 | ಪ್ರೌಢಶಾಲಾ ಶಿಕ್ಷಕರ-ಕೌನ್ಸೆಲಿಂಗ್(ವಿಭಾಗ ಮಟ್ಟದಲ್ಲಿ)<br>* ಭಾಷಾ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿಶೇಷ ಶಿಕ್ಷಕರು<br>* ದೈಹಿಕ ಶಿಕ್ಷಣ ಶಿಕ್ಷಕರು | 05.06.2011<br>06.06.2011<br>07.06.2011<br>08.06.2011 | ಸಂಬಂಧಿಸಿದ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರು (ಆಡಳಿತ) |
| 18 | ರಾಜ್ಯಮಟ್ಟದ ಕೌನ್ಸೆಲಿಂಗ್‌ಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆ ಪ್ರಕಟಣೆ | 04.06.2011 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು ಧಾರವಾಡ ಆಯುಕ್ತಾಲಯ<br>4)ನಿರ್ದೇಶಕರು ಗುಲ್ಬರ್ಗಾ ಆಯುಕ್ತಾಲಯ |
| 19 | ರಾಜ್ಯ ಮಟ್ಟದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕೌನ್ಸೆಲಿಂಗ್ (ಸಂಬಂಧಿಸಿದ ವಿಭಾಗದ ನಿರ್ದೇಶಕರ ಕಛೇರಿಯಲ್ಲಿ)<br>* ಮುಖ್ಯ ಶಿಕ್ಷಕರು, ಪದವೀಧರೇತರ ಮುಖ್ಯ ಶಿಕ್ಷಕರ ವೃಂದ ಮತ್ತು ವಿಶೇಷ ಶಿಕ್ಷಕರು<br>* ಸಹಶಿಕ್ಷಕರು | 10.06.2011<br>11.06.2011 & 12.06.2011 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು ಗುಲ್ಬರ್ಗಾ ಆಯುಕ್ತಾಲಯ |
| 20 | ರಾಜ್ಯಮಟ್ಟದ ಕೌನ್ಸೆಲಿಂಗ್‌ಗಾಗಿ ಪ್ರೌಢಶಾಲಾ ಶಿಕ್ಷಕರ ಖಾಲಿ ಹುದ್ದೆ ಪ್ರಕಟಣೆ | 10.06.2011 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು ಧಾರವಾಡ ಆಯುಕ್ತಾಲಯ<br>4)ನಿರ್ದೇಶಕರು ಗುಲ್ಬರ್ಗಾ ಆಯುಕ್ತಾಲಯ |
| 21 | ರಾಜ್ಯ ಮಟ್ಟದ ಪ್ರೌಢಶಾಲಾ ಸಹ ಶಿಕ್ಷಕರ ಕೌನ್ಸೆಲಿಂಗ್ (ಸಂಬಂಧಿಸಿದ ವಿಭಾಗದ ನಿರ್ದೇಶಕರ ಹಂತದಲ್ಲಿ)<br>* ಭಾಷಾ ಶಿಕ್ಷಕರು<br>* ವಿಷಯ ಶಿಕ್ಷಕರು<br>* ವಿಶೇಷ ಶಿಕ್ಷಕರು & * ದೈಹಿಕ ಶಿಕ್ಷಣ ಶಿಕ್ಷಕರು | 14.06.2011<br>15.06.2011<br>16.06.2011 | ಸಂಬಂಧಿಸಿದ<br>1) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)<br>2) ನಿರ್ದೇಶಕರು (ಪ್ರೌಢ ಶಿಕ್ಷಣ)<br>3) ನಿರ್ದೇಶಕರು ಧಾರವಾಡ ಆಯುಕ್ತಾಲಯ<br>4) ನಿರ್ದೇಶಕರು ಗುಲ್ಬರ್ಗಾ ಆಯುಕ್ತಾಲಯ |

(ಎ.ದೇವಪ್ರಕಾಶ್)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)